ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ

ದಿನಾಂಕ : DATE : 14/02/2020

# ಕ್ರಿಮಿನಲ್‌ಗಳ ಸ್ಪರ್ಧೆಗೆ ಅಂಕುಶ

## ಅಪರಾಧಮುಕ್ತ ರಾಜಕೀಯಕ್ಕೆ ಮಹತ್ವದ ಕ್ರಮ

## ಬಾಕಿ ಕೇಸುಗಳ ವಿವರ, ಟಿಕೆಟ್‌ಗೆ ಕಾರಣ ಕೊಡಿ

## ಅಭ್ಯರ್ಥಿಗಳು, ಪಕ್ಷಗಳಿಗೆ ಸುಪ್ರೀಂ ನಿರ್ದೇಶನ

• **ಪಿಟಿಐ** ನವದೆಹಲಿ

ಭಾರತೀಯ ರಾಜಕೀಯವನ್ನು ಅಪರಾಧ ಮುಕ್ತಗೊಳಿಸುವ ನಿಟ್ಟಿನಲ್ಲಿ ದೂರಗಾಮಿ ಪರಿಣಾಮ ಹೊಂದಿರುವ ಆದೇಶವೊಂದನ್ನು ಹೊರಡಿಸಿರುವ ಸುಪ್ರೀಂಕೋರ್ಟ್, ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ವಿರುದ್ಧ ಬಾಕಿ ಇರುವ ಕ್ರಿಮಿನಲ್ ಪ್ರಕರಣಗಳ ವಿವರಗಳನ್ನು ಎಲ್ಲ ರಾಜಕೀಯ ಪಕ್ಷಗಳೂ ತಮ್ಮ ವೆಬ್ ಸೈಟ್‌ನಲ್ಲಿ ಪ್ರಕಟಿಸಬೇಕು ಎಂದು ಸೂಚಿಸಿದೆ. ಜೊತೆಗೆ ಕ್ರಿಮಿನಲ್ ಕೇಸುಗಳು ಇದ್ದರೂ ಅಂತಹ ವ್ಯಕ್ತಿಗೆ ಟಿಕೆಟ್ ಕೊಟ್ಟಿದ್ದು ಏಕೆ ಎಂಬುದಕ್ಕೆ ಸ್ಪಷ್ಟ ಕಾರಣಗಳನ್ನು ನೀಡಬೇಕು. ಈ ಕಾರಣಗಳು ವಿದ್ಯಾರ್ಹತೆ ಹಾಗೂ ಪ್ರತಿಭೆಗೆ ಸಂಬಂಧಿಸಿದ ಸಮರ್ಥನೆ ಆಗಿರಬೇಕೇ ಹೊರತು ಗೆಲುವಿನ ಕುರಿತದ್ದಾಗಿರಬಾರದು ಎಂದು ಸುಪ್ರೀಂ ಕೋರ್ಟ್ ಗುರುವಾರ ಆದೇಶಿಸಿದೆ.



ಅಭ್ಯರ್ಥಿಗಳ ವಿರುದ್ಧ ಬಾಕಿ ಇರುವ ಕ್ರಿಮಿನಲ್ ಪ್ರಕರಣಗಳನ್ನು ಫೇಸ್‌ಬುಕ್, ಟ್ವೀಟರ್‌ನಂತಹ ಜಾಲತಾಣಗಳಲ್ಲಿ, ಒಂದು ಸ್ಥಳೀಯ ಭಾಷೆ, ಒಂದು ರಾಷ್ಟ್ರೀಯ ದಿನ ಪತ್ರಿಕೆಯಲ್ಲಿ ಪ್ರಕಟಿಸಬೇಕು. ಅಭ್ಯರ್ಥಿಗಳ ಕ್ರಿಮಿನಲ್ ಹಿನ್ನೆಲೆ ವಿವರಗಳನ್ನು ಅವರು ಆಯ್ಕೆಯಾದ 48 ಗಂಟೆಗಳ ಒಳಗೆ ಅಥವಾ ನಾಮಪತ್ರ ಸಲ್ಲಿಕೆಗೆ ಇರುವ ದಿನಕ್ಕಿಂತ 2 ವಾರ ಮೊದಲು ಪ್ರಕಟಿಸಬೇಕು. ಜೊತೆಗೆ ಅಭ್ಯರ್ಥಿಯನ್ನು ಆಯ್ಕೆ ಮಾಡಿದ 72 ತಾಸುಗಳಲ್ಲಿ ರಾಜಕೀಯ ಪಕ್ಷಗಳು ಹೊಸ ಸೂಚನೆಗಳಿಗೆ ಬದ್ಧವಿರುವುದಾಗಿ ಚುನಾವಣಾ ಆಯೋಗಕ್ಕೆ ವರದಿ ಸಲ್ಲಿಸಬೇಕು.

» 14

### ಏನೇನು ನಿಯಮ?

1. ಬಾಕಿ ಪ್ರಕರಣಗಳ ವಿವರವನ್ನು ವೆಬ್ ಸೈಟ್‌ನಲ್ಲಿ ಎಲ್ಲ ಪಕ್ಷಗಳೂ ಪ್ರಕಟಿಸಬೇಕು
2. ಕ್ರಿಮಿನಲ್ ಆಗಿದ್ದರೂ ಟಿಕೆಟ್ ನೀಡಿದ್ದೇಕೆ ಎಂಬುದಕ್ಕೆ ಸ್ಪಷ್ಟ ಕಾರಣ ಕೊಡಬೇಕು
3. ಫೇಸ್‌ಬುಕ್, ಟ್ವೀಟರ್, ಪತ್ರಿಕೆಗಳಲ್ಲೂ ವಿವರ ಪ್ರಕಟಿಸಿ, ಆಯೋಗಕ್ಕೆ ತಿಳಿಸಬೇಕು
4. ಅಭ್ಯರ್ಥಿ ಗೆಲುವೊಂದೇ ಮಾನದಂಡವಾಗಿರಬಾರದು: ಸುಪ್ರೀಂ ಮಹತ್ವದ ಆದೇಶ

**43%**: ಸಂಸತ್ತಿನ ಒಟ್ಟು ಸದಸ್ಯರ ಪೈಕಿ ಕ್ರಿಮಿನಲ್ ಪ್ರಕರಣ ಎದುರಿಸುತ್ತಿರುವವರ ಸಂಖ್ಯೆ

ವಿಷಯ :
ಪತ್ರಿಕೆಯ ಹೆಸರು: ಕನ್ನಡಪ್ರಭ ದಿನಾಂಕ 14/02/2020

# ಕ್ರಿಮಿನಲ್‌ಗಳ ಸ್ಪರ್ಧೆಗೆ ಅಂಕುಶ

3ನೇ ಪುಟದಿಂದ

ಒಂದು ವೇಳೆ ರಾಜಕೀಯ ಪಕ್ಷಗಳು ನ್ಯಾಯಾಲಯದ ಸೂಚನೆಗಳನ್ನು ಪಾಲಿಸಲು ವಿಫಲವಾದರೆ ಚುನಾವಣಾ ಆಯೋಗ ಆ ವಿಚಾರವನ್ನು ನ್ಯಾಯಾಲಯದ ಗಮನಕ್ಕೆ ತರಬೇಕು ಎಂದು ಸೂಚಿಸಿದೆ. ಅಭ್ಯರ್ಥಿಗಳ ಆಯ್ಕೆಗೆ ಏನು ಕಾರಣ, ಅವರ ವಿದ್ಯಾರ್ಹತೆ, ಅವರ ಸಾಧನೆ ಮತ್ತು ಅರ್ಹತೆಯನ್ನು ಸ್ಪಷ್ಟವಾಗಿ ನಮೂದಿಸಿರಬೇಕು ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ರಾಜಕಾರಣಕ್ಕೆ ಕ್ರಿಮಿನಲ್‌ಗಳ ಪ್ರವೇಶ ಇತ್ತೀಚಿನ ದಶಕಗಳಲ್ಲಿ ಹೆಚ್ಚಾಗಿದೆ ಎಂಬ ಕಳವಳಗಳ ಸಂದರ್ಭದಲ್ಲೇ ಸರ್ವೋಚ್ಚ ನ್ಯಾಯಾಲಯ ನೀಡಿರುವ ಈ ತಾಕೀತು ಅತ್ಯಂತ ಮಹತ್ವ ಪಡೆದುಕೊಂಡಿದೆ. ನ್ಯಾಯಾಲಯದ ಆದೇಶ ಚುನಾವಣಾ ಪ್ರಜಾಪ್ರಭುತ್ವವನ್ನು ಮತ್ತಷ್ಟು ಬಲಶಾಲಿಯಾಗಿಸಲಿದೆ.

ಮತ ಹಾಕುವ ಮುನ್ನ ಎಲ್ಲ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಆಯ್ಕೆ ಮಾಡಲು ಮತದಾರರಿಗೂ ನೆರವಾಗಲಿದೆ ಎಂದು ಬಿಜೆಪಿ ಹೇಳಿದೆ. ರಾಜಕಾರಣದಲ್ಲಿ ಕ್ರಿಮಿನಲ್‌ಗಳಿರುವುದರ ವಿರುದ್ಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೋರಾಟ ನಡೆಸುತ್ತಿದ್ದರು. ಅವರ ಹೋರಾಟವನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದೆ ಎಂದು ಕಾಂಗ್ರೆಸ್ ಹೇಳಿದೆ.

## ಏನಿದು ಪ್ರಕರಣ?

ಚುನಾವಣೆಗೆ ಸ್ಪರ್ಧಿಸುವ ಎಲ್ಲ ಅಭ್ಯರ್ಥಿಗಳೂ ತಮ್ಮ ಕ್ರಿಮಿನಲ್ ಹಿನ್ನೆಲೆ ಕುರಿತು ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಬೇಕು.

ಜತೆಗೆ ಪತ್ರಿಕೆ ಹಾಗೂ ಟೀವಿ ಚಾನಲ್‌ಗಳ ಮೂಲಕ ಆ ಬಗ್ಗೆ ಹೆಚ್ಚು ಪ್ರಚಾರ ನೀಡಬೇಕು ಎಂದು 2018ರ ಸೆಪ್ಟೆಂಬರ್‌ನಲ್ಲಿ ಪಂಚ ಸದಸ್ಯ ಸಂವಿಧಾನಿಕ ಪೀಠ ಸರ್ವಾನುಮತದ ಆದೇಶ ನೀಡಿತ್ತು.

ಆದರೆ ಇದನ್ನು ಅಭ್ಯರ್ಥಿಗಳು ಪಾಲನೆ ಮಾಡುತ್ತಿಲ್ಲದ ಕಾರಣ ನ್ಯಾಯಾಂಗ ನಿಂದನೆಯಾಗಿದೆ ಎಂದು ಬಿಜೆಪಿ ನಾಯಕ ಅಶ್ವಿನಿ ಉಪಾಧ್ಯಾಯ ಅರ್ಜಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿ ಆದೇಶ ಹೊರಡಿಸಿದ ನ್ಯಾ। ರೋಹಿಂಟನ್ ಫಾಲಿ ನಾರಿಮನ್ ನೇತೃತ್ವದ ಪೀಠ, ಕಳೆದ ನಾಲ್ಕು ಸಾರ್ವತ್ರಿಕ ಚುನಾವಣೆಗಳಿಂದ ರಾಜಕಾರಣದಲ್ಲಿ ಕ್ರಿಮಿನಲ್‌ಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗಿದೆ ಎಂದು ಕಳವಳ ವ್ಯಕ್ತಪಡಿಸಿತಲ್ಲದೆ, ಕೆಲವೊಂದು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿತು.

7 (a)